ಚರ್ಮ ಶಿಲ್ಪಿಗಳ ಕಾಮನ್ ವರ್ಕ್‌ಶೆಡ್ ನಿರ್ಮಾಣ

591(951) ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಿಂದ 2001-02ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಜನರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯಲ್ಲಿ ಅಥಣಿ ಪಟ್ಟಣದಲ್ಲಿ ಚರ್ಮ ಶಿಲ್ಪಿಗಳ ಕಾಮನ್ ವರ್ಕ್‌ಶೆಡ್ ನಿರ್ಮಾಣಕ್ಕಾಗಿ ರೂ. 5.50 ಲಕ್ಷಗಳ ಅನುದಾನ ಬಿಡುಗಡೆಯಾಗಿ ಕೆಲಸ ಪೂರ್ಣವಾಗಿದೆಯೇ?

ಆ) ಈ ಅನುದಾನವನ್ನು ಯಾವ ಏಜೆನ್ಸಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ. ಈ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆಯೇ?

ಇ) ಅನುದಾನದ ಬಿಡುಗಡೆಯನ್ನು ಯಾವ ಪ್ರಕಾರ ಯಾವ ಹಂತದಲ್ಲಿ ಮಾಡಲಾಗಿದೆ?

ಈ) ಈ ಕಟ್ಟಡವನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆಯೇ ಕಾಮಗಾರಿ ಪೂರ್ತಿ ಮುಗಿದಿದೆಯೇ; ಈ ಕಟ್ಟಡಕ್ಕೆ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆ ಮಾಡಿದ್ದು ಏಕೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯಿಂದ 2001-02ನೇ ಸಾಲಿನಲ್ಲಿ ಅಥಣಿ ಪಟ್ಟಣದ ಚರ್ಮ ಶಿಲ್ಪಗಳ ಕಾಮನ್ ವರ್ಕ್‌ಶೆಡ್ ನಿರ್ಮಾಣಕ್ಕಾಗಿ ರೂ. 5.47 ಲಕ್ಷಗಳು ಬಿಡುಗಡೆಯಾಗಿದ್ದು, ಕಟ್ಟಡದ ಕಾಮಗಾರಿ ಕೆಲಸ ಒಳಗಡೆ ವಿದ್ಯುತ್ತೀಕರಣ, 5 ಬಾಗಿಲುಗಳನ್ನು ಕೂಡಿಸುವುದು, 3 ಕಿಟಕಿ ಗ್ಲಾಸುಗಳನ್ನು ಕೂಡಿಸುವುದು ಕೆಲಸ ಹೊರತುಪಡಿಸಿ ಪೂರ್ಣಗೊಂಡಿದೆ.

ಆ) ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನವನ್ನು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಬೆಳಗಾಂ ಜಿಲ್ಲಾ ಪಂಚಾಯತ್‌ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಈ ಅನುದಾನವನ್ನು ಜಿಲ್ಲಾ ಪಂಚಾಯತ್‌ನಿಂದ ನೇರವಾಗಿ ಶ್ರೀ ಶಿವಶರಣ ಹರಳಯ್ಯ ಟ್ರಸ್ಟ್ ಕಮಿಟಿ, ಅಥಣಿ ರವರಿಗೆ ಬಿಡುಗಡೆ ಮಾಡಲಾಗಿದೆ. ಅಂದಾಜು ವೆಚ್ಚ 7.96 ಲಕ್ಷ ರೂ.ಗಳಲ್ಲಿ 2.50 ಲಕ್ಷ ರೂ.ಗಳ ಕಾಮಗಾರಿಯನ್ನು ಸದರಿ ಟ್ರಸ್ಟ್‌ನವರು ಕೈಗೊಂಡಿದ್ದರಿಂದ ಹಾಗೂ ಅನುದಾನವನ್ನು ಟ್ರಸ್ಟ್‌ನವರಿಗೆ ಬಿಡುಗಡೆ ಮಾಡಲಾಗಿರುವುದರಿಂದ ಟೆಂಡರ್ ಕರೆದಿರುವುದಿಲ್ಲ ಹಾಗೂ ಸದರಿ ಟ್ರಸ್ಟ್‌ನವರಿಗೆ ಕಟ್ಟಡವನ್ನು ಪೂರ್ಣ ಮಾಡಲು ಅನುದಾನವನ್ನು ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆ ಮಾಡಲಾಗಿದೆ.

ಇ) ಆಗಸ್ಟ್ 2001ರಲ್ಲಿ ಮಂಜೂರಾದ ಅನುದಾನ 5.47 ಲಕ್ಷ, ರೂ.ಗಳನ್ನು ಕಟ್ಟಡದ ಕಾಮಗಾರಿಯು ಛಾವಣಿ ಹಂತದಲ್ಲಿರುವಾಗ ಬೆಳಗಾವಿ ಜಿಲ್ಲಾ ಪಂಚಾಯತ್‌ನಿಂದ ಶ್ರೀ ಶಿವಶರಣ ಹರಳಯ್ಯ ಟ್ರಸ್ಟ್ ನವರಿಗೆ ನವೆಂಬರ್ 2001ರಲ್ಲಿ ಬಿಡುಗಡೆ ಮಾಡಲಾಗಿದೆ.

ಈ) ಈ ಕಟ್ಟಡದ ಸ್ಥಳವು ಶ್ರೀ ಶಿವಶರಣ ಹರಳಯ್ಯ ಟ್ರಸ್ಟ್ ಕಮಿಟಿಯ ಸ್ವಂತ ನಿವೇಶನವಾಗಿದ್ದು, ಸಾಮೂಹಿಕ ಉಪಯೋಗಕ್ಕಾಗಿ ಟ್ರಸ್ಟ್‌ನವರು ಇದನ್ನು ಕಟ್ಟಿಸುತ್ತಿದ್ದು, ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಬರುವುದಿಲ್ಲ. ಸದರಿ ಅನುದಾನವು ಸಾಮೂಹಿಕ ವರ್ಕ್‌ಶೆಡ್ಡಿಗೆ

ಮಂಜೂರಾಗಿರುವ ಕಾರಣ ಕಟ್ಟಡದ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ಕಟ್ಟಡವನ್ನು ಬೇಗನೆ ಪೂರ್ಣಗೊಳಿಸುವ ಉದ್ದೇಶದಿಂದ ಜಿಲ್ಲಾ ಪಂಚಾಯತ್‌ನಿಂದ ಅನುದಾನ ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ ಸಕ್ಕರೆ ದಾಸ್ತಾನು

592(1087) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ; ಜಿಲ್ಲಾವಾರು ವಿವರ ಕೊಡುವುದು;

ಆ) ಈ ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುತ್ತಿರುವ ಸಕ್ಕರೆಯ ಪ್ರಮಾಣವೆಷ್ಟು?

ಇ) ಹಾಲಿ ಎಷ್ಟು ಸಕ್ಕರೆ ದಾಸ್ತಾನು ಇದೆ ಇದರ ಮಾರಾಟಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು ಏನು?

ಈ) ಹೆಚ್ಚುವರಿ ಸಕ್ಕರೆಯನ್ನು ಹೊರ ರಾಜ್ಯಗಳಿಗೆ ಮತ್ತು ಬೇರೆ ದೇಶಗಳಿಗೆ ಮಾರಾಟ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ? ಇದಕ್ಕೆ ದೊರಕಿರುವ ಪ್ರತಿಕ್ರಿಯೆ ಏನು?

ಉ) ಈ ಸಕ್ಕರೆಯನ್ನು ಯಾವಾಗ ಮಾರಾಟ ಮಾಡಲಾಗುವುದು? ಈ ಕೈಗಾರಿಕೆಗೆ ಯಾವ ರೀತಿ ಉತ್ತೇಜನ ನೀಡಲಾಗುತ್ತಿದೆ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 40 ಸಕ್ಕರೆ ಕಾರ್ಖಾನೆಗಳಿವೆ. ಅವುಗಳಲ್ಲಿ 3 ಇತ್ತೀಚೆಗೆ ಪ್ರಾಯೋಗಿಕ ಕಬ್ಬು ನುರಿಸುವಿಕೆ ಮಾಡಿದ ಹೊಸ ಕಾರ್ಖಾನೆಗಳಾಗಿವೆ. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:

ಬೀದರ್	-	01
ಗುಲ್ಬರ್ಗಾ	-	01
ಬಿಜಾಪುರ	-	01
ಬಾಗಲಕೋಟೆ	-	05
ಬೆಳಗಾಂವ	-	12
ಹಾವೇರಿ	-	01
ಶಿವಮೊಗ್ಗ	-	01
ಮೈಸೂರು	-	02
ಚಾಮರಾಜನಗರ	-	01
ಮಂಡ್ಯ	-	04
ದಾವಣಗೆರೆ	-	03